# ವಿವೇಕಾನಂದರ ಕಲ್ಪನೆಯ ಭಾರತ

ಸ್ವಾಮಿ ಪುರುಷೋತ್ತಮಾನಂದ

**“ಶತಶತಮಾನಗಳಿಂದಲೂ ಕಡೆಗಣಿಸಲ್ಪಟ್ಟ ಜನಸಾಮಾನ್ಯರಲ್ಲಿಯೇ ರಾಷ್ಟ್ರದ ನಿಜವಾದ ಶಕ್ತಿ ಇರುವುದು, ಅವರ ಏಳ್ಗೆಯಿಂದ ಮತ್ತೆ ಭಾರತ ತನ್ನ ಕಳೆದುಕೊಂಡ ಭವ್ಯತೆಯನ್ನು ಪಡೆಯುತ್ತದೆ” ಎಂಬ ಸ್ವಾಮಿ ವಿವೇಕಾನಂದರ ಕಲ್ಪನೆಯ ಭಾರತದ ಕಿರುಪರಿಚಯವನ್ನು ಮಾಡಿಕೊಟ್ಟಿರುವ ಸ್ವಾಮಿ ಪುರುಷೋತ್ತಮಾನಂದಜಿಯವರು, ಬೆಳಗಾಮಿನ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾಗಿರುವರು.**

ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿದ್ದಾಗ ಒಮ್ಮೆ ಖೇತ್ರಿ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ತಂಗಿದ್ದರು. ಅಲ್ಲಿ ಅವರನ್ನು ಕಾಣಲು ಜನ ತಂಡೋಪತಂಡವಾಗಿ ಬರಲಾರಂಭಿಸಿದರು. ಕ್ರಮೇಣ ಬರುವವರ ಸಂಖ್ಯೆ ಎಷ್ಟು ಹೆಚ್ಚಾಗಿಬಿಟ್ಟಿತೆಂದರೆ ಮೂರು ಹಗಲು ಮೂರು ರಾತ್ರಿಗಳವರೆಗೆ ಸ್ವಾಮೀಜಿ ಜನರೊಂದಿಗೆ ನಿರಂತರವಾಗಿ ಮಾತನಾಡುತ್ತಲೇ ಇರಬೇಕಾಯಿತು. ಜನರೇನೋ ಬರುತ್ತಿದ್ದರು, ಅಧ್ಯಾತ್ಮ—ಸಂಸಾರ—ಶಾಸ್ತ್ರಗಳು ಈ ವಿಚಾರಗಳನ್ನೆಲ್ಲ ಮಾತನಾಡಿ ನಮಸ್ಕಾರ ಮಾಡಿ ಹೊರಟುಬಿಡುತ್ತಿದ್ದರು. ಆದರೆ ಅಷ್ಟುಹೊತ್ತಿಗೆ ಇನ್ನಷ್ಟು ಜನ ಬಂದು ಕುಳಿತಿರುತ್ತಿದ್ದರು. ಹೀಗಾಗಿ ಸ್ವಾಮೀಜಿಯವರಿಗೆ ಒಂದೇ ಒಂದು ನಿಮಿಷವೂ ಬಿಡುವು ಸಿಕ್ಕಿರಲಿಲ್ಲ. ಅಷ್ಟೇ ಅಲ್ಲ, ಅವರು ಹಸಿದಿದ್ದಾರೆಯೇ? ಏನಾದರೂ ಉಂಡರೆ? ಎಂದು ಒಬ್ಬರಾದರೂ ಕೇಳಬೇಕಲ್ಲ! ಮೂರನೆಯ ದಿನ ರಾತ್ರಿ ಬಂದಿದ್ದ ಜನರೆಲ್ಲ ಹೊರಟುಹೋದಮೇಲೆ ಮೂಲೆಯಲ್ಲಿ ನಿಂತಿದ್ದ ಒಬ್ಬ ಮನುಷ್ಯ ಅವರನ್ನು ಮಾತನಾಡಿಸಿದ. ಅವನೊಬ್ಬ ಅಂತ್ಯಜ, ಕಡುಬಡವ ಎಂಬುದು ನೋಡಿದರೇ ತಿಳಿಯುತ್ತಿತ್ತು. ಆತ ಹೇಳಿದ:

“ಸ್ವಾಮೀಜಿ, ನಾನು ಮೂರು ದಿನಗಳಿಂದಲೂ ಗಮನಿಸುತ್ತಲೇ ಇದ್ದೇನೆ. ನೀವು ಏನೂ ಆಹಾರವನ್ನು ತೆಗೆದುಕೊಂಡಂತೆ ಕಾಣಲಿಲ್ಲ. ಇಲ್ಲಿಗೆ ಬಂದವರೆಲ್ಲ ಆರಾಮವಾಗಿ ಮಾತುಕತೆಯಾಡಿಕೊಂಡು ಹೊರಟುಹೋಗಿಬಿಟ್ಟರು. ನೀವು ಮಾತ್ರ ಹೀಗೆ ಉಪವಾಸವಿದ್ದೀರಿ. ನಿಮ್ಮನ್ನು ನೋಡಿದರೆ ನನಗೆ ತುಂಬ ಸಂಕಟವಾಗುತ್ತದೆ ಸ್ವಾಮೀಜಿ!”

ಈ ಬಡವನಿಗೆ ಇರುವ ಕಾಳಜಿಯನ್ನು ಕಂಡು ಸ್ವಾಮೀಜಿಯವರ ಹೃದಯ ತುಂಬಿ ಬಂತು—ಹೇಳಿದರು: “ಹೌದು, ನಾನು ತುಂಬ ಹಸಿದಿದ್ದೇನೆ. ನೀನು ನನಗೇನಾದರೂ ತಿನ್ನಲು ತಂದು ಕೊಡಲು ಸಾಧ್ಯವೇ?” ಆತ ಅಂಜುತ್ತ ಅಂಜುತ್ತಲೇ ಉತ್ತರಿಸಿದ: “ನಿಮಗೇನಾದರೂ ತಿನ್ನಲು ಕೊಡಬೇಕೆಂಬ ಆಸೆಯೇನೋ ನನಗಿದೆ ಸ್ವಾಮೀಜಿ. ಆದರೆ ನಾನೊಬ್ಬ ಚಮ್ಮಾರ. ನನ್ನಂಥವರು ಮುಟ್ಟಿದ್ದನ್ನು ನೀವು ಹೇಗೆ ತಿನ್ನಲಾದೀತು? ಆದರೆ ನೀವು ಅನುಮತಿ ನೀಡುವುದಾದರೆ ನಾನು ಹಿಟ್ಟು, ಬೇಳೆ ಮೊದಲಾದುವನ್ನೆಲ್ಲ ತಂದು ಕೊಡುತ್ತೇನೆ. ನೀವೇ ಅಡುಗೆ ಮಾಡಿಕೊಳ್ಳಬಹುದು. ನೀವು ಒಪ್ಪಿಕೊಂಡರೆ ನಾನು ಧನ್ಯ.”

ಆಗ ಸ್ವಾಮೀಜಿಯವರೆಂದರು, “ನೋಡು, ನಾನೊಬ್ಬ ಸಂನ್ಯಾಸಿ. ಅಗ್ನಿಸ್ಪರ್ಶ ಮಾಡುವಂತಿಲ್ಲ. ಆದ್ದರಿಂದ ನೀನೇನೂ ಚಿಂತಿಸಬೇಡ. ನೀನೇ ಚಪಾತಿಗಳನ್ನು ಮಾಡಿ ತಂದುಕೊಡು. ನಾನು ಸಂತೋಷದಿಂದ ಅದನ್ನು ತೆಗೆದುಕೊಳ್ಳುತ್ತೇನೆ” ಎಂದು. ಈಗ ಚಮ್ಮಾರನಿಗೆ ವಿಪರೀತ ದಿಗಿಲಾಯಿತು. ಹೇಳಿದ: “ಸ್ವಾಮೀಜಿ, ಅದು ಮಾತ್ರ ಸಾಧ್ಯವಿಲ್ಲ. ನಾನೇನೋ ಇವತ್ತು ನಿಮಗೆ ಚಪಾತಿಗಳನ್ನು ಮಾಡಿ ತಂದುಕೊಡಬಲ್ಲೆ. ಆದರೆ ನಾಳೆ ದಿನ ಈ ವಿಷಯ ಮಹಾರಾಜನಿಗೇನಾದರೂ ಗೊತ್ತಾಯಿತೆಂದರೆ ನನ್ನ ಗ್ರಹಚಾರ ಬಿಡಿಸುತ್ತಾನೆ.” ಆಗ ಸ್ವಾಮೀಜಿಯವರೆಂದರು: “ನೀನೇನೂ ಹೆದರಬೇಡಯ್ಯ! ನಿನಗೇನೂ ತೊಂದರೆಯಾಗದಂತೆ ನಾನು ನೋಡಿಕೊಳ್ಳುತ್ತೇನೆ. ನಾನೇ ಕೇಳಿ ತರಿಸಿಕೊಳ್ಳುತ್ತಿರುವಾಗ ನಿನಗೇಕೆ ಭಯ?” ಮತ್ತೆ ಮಾತನ್ನು ಮುಂದುವರಿಸುತ್ತ ಪ್ರೀತಿಪೂರ್ವಕವಾಗಿ ಒತ್ತಾಯಪಡಿಸುತ್ತ ಹೀಗೆಂದರು: “ಹೋಗಲಿ, ಏನಾದರೂ ತರುತ್ತೀಯೊ ಇಲ್ಲವೋ ಹೇಳು. ನಾನಂತೂ ತುಂಬ ಹಸಿದಿದ್ದೇನೆ. ಅದು ನಿನಗೇ ಕಾಣುತ್ತಿದೆ.”

ಸ್ವಾಮೀಜಿಯವರು ಎಷ್ಟು ಹೇಳಿದರೂ ಚಮ್ಮಾರನಿಗೆ ಸಂಪೂರ್ಣ ಭರವಸೆ ಉಂಟಾಗಲಿಲ್ಲ. ಆದರೂ ಅವರ ಪರಿಸ್ಥಿತಿಗಾಗಿ ಮರುಗಿ, ಏನಾದರಾಗಲಿ ಎಂದು ಚಪಾತಿಗಳನ್ನು ಮಾಡಿ ತಂದುಕೊಟ್ಟ. ಆ ಬಡ ಚಮ್ಮಾರ ಮಾಡಿದ ಚಪಾತಿಗಳು ಹೇಗಿದ್ದಿರಬಹುದು! ಆದರೆ ಅದನ್ನು ಬಾಯಿಗಿಟ್ಟುಕೊಂಡಾಗ ಸ್ವಾಮೀಜಿಯವರಿಗೆ ಅದು ದೇವಲೋಕದ ಅಮೃತಕ್ಕಿಂತಲೂ ಸವಿಯಾಗಿ ತೋರಿತು. ಕೃತಜ್ಞತೆಯಿಂದ ಅವರ ಹೃದಯ ಕರಗಿ ಕಣ್ಣೀರಾಗಿ ಹರಿಯಿತು. ಆಹಾ! ಭಾರತದಲ್ಲಿ ಇಂತಹ ಉದಾರಹೃದಯಿಗಳಾದ ಲಕ್ಷಾಂತರ ಜನ ಬಡಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾರೆ. ಆದರೆ ನಾವು ಅವರನ್ನು ಅಸ್ಪೃಶ್ಯರೆಂದು ಕರೆದು ಅನಿಷ್ಟಗಳಂತೆ ದೂರವಿರಿಸಿದ್ದೇವೆ!” ಎಂದು ಅವರು ಮರುಗಿದರು. ಕೆಲದಿನಗಳಾದ ಮೇಲೆ ಸ್ವಾಮೀಜಿಯವರು ಖೇತ್ರಿರಾಜ್ಯದ ಮಹಾರಾಜನಿಗೆ ಈ ವಿಷಯ ತಿಳಿಸಿದರು. ಮಹಾರಾಜ ಚಮ್ಮಾರನಿಗೆ ಕರೆ ಕಳಿಸಿದ. “ಅಯ್ಯೋ, ನಾನೆಂದುಕೊಂಡಂತೆಯೇ ಆಯಿತಲ್ಲ ಈಗ!” ಎಂದುಕೊಳ್ಳುತ್ತ ಚಮ್ಮಾರ ಭಯದಿಂದ ನಡುಗುತ್ತಲೇ ಬಂದ. ಆದರೆ ಅಲ್ಲಿ ಅವನಿಗೆ ದೊರೆತದ್ದು ಶಿಕ್ಷೆಯಲ್ಲ, ಶ್ರೀರಕ್ಷೆ. ಮಹಾರಾಜ ಚಮ್ಮಾರನಿಗೆ ಬಹುದೊಡ್ಡ ಬಹುಮಾನವೊಂದನ್ನು ಅನುಗ್ರಹಿಸಿ, ಮುಂದೆ ಅವನ ಜೀವನಕ್ಕೆ ಏನೂ ಕೊರತೆಯಾಗದಂತೆ ಮಾಡಿದ.

ಈ ಘಟನೆ ಎಷ್ಟು ಅರ್ಥಪೂರ್ಣವಾದದ್ದು ಎಂಬುದನ್ನು ನಾವು ಭಾವಿಸಿ ನೋಡಿದಾಗ ಮನವರಿಕೆಯಾಗುತ್ತದೆ. ನಮ್ಮ ಭಾರತ ಬಹುಕಾಲ ಅವನತ ಸ್ಥಿತಿಯಲ್ಲಿದ್ದುದಕ್ಕೆ ನಾವು ಜನ ಸಾಮಾನ್ಯರನ್ನು ಕಡೆಗಣಿಸಿ ಅವರನ್ನು ಮೂಲೆಪಾಲಾಗಿಸಿದ್ದೇ ಕಾರಣ ಎಂಬುದು ಸ್ವಾಮಿ ವಿವೇಕಾನಂದರ ಅನುಭವಪೂರ್ಣವಾದ ಹೇಳಿಕೆ. ಪರಿವ್ರಾಜಕ ಸಂನ್ಯಾಸಿಯಾಗಿ ಸಂಚರಿಸುತ್ತ ಸಮಸ್ತ ಭಾರತವನ್ನೂ ಅದರ ದುರ್ಗತಿಗೆ ಕಾರಣವನ್ನೂ ಕಣ್ಣಾರೆ ಕಂಡವರು ಅವರು. ಭಾರತವು ಬೆರಳೆಣಿಕೆಯ ಶ್ರೀಮಂತರ ನಾಡಲ್ಲ. ಅದು ಕೋಟಿ ಕೋಟಿ ಸಂಖ್ಯೆಯ ಬಡವರ ರಾಷ್ಟ್ರ. ನಾವು ಮೇಲ್ವರ್ಗದವರೆಂಬವರು ಅವರ ಮೇಲ್ಮೆಗೆ ಅವಕಾಶ ಕೊಡದೆ ಅವರನ್ನು ಮೂಲೆಗುಂಪಾಗಿಸಿದ್ದರಿಂದ ಕಾಲಕ್ರಮದಲ್ಲಿ ಅನ್ಯರ ತುಳಿತಕ್ಕೆ ಸಿಕ್ಕಿ ಭಾರತವೇ ಮೂಲೆಗುಂಪಾಗುವಂತಾಯಿತು.

ಸ್ವಾಮಿ ವಿವೇಕಾನಂದರು ಸಂಚರಿಸುತ್ತಿದ್ದ ಸಂದರ್ಭದಲ್ಲಿ ಕೆಲವೊಮ್ಮೆ ಶ್ರೀಮಂತರ, ದಿವಾನರ, ರಾಜಮಹಾರಾಜರ ಅತಿಥಿಗಳಾಗಿಯೂ ಇರುತ್ತಿದ್ದರು, ಮತ್ತೆ ಕೆಲವೊಮ್ಮೆ ಬಡವರ ಜೋಪಡಿಗಳಲ್ಲೂ ವಾಸವಾಗಿರುತ್ತಿದ್ದರು. ಆದರೆ ಅವರು ಸಿರಿವಂತರ ಹಾಗೂ ರಾಜರ ಅತಿಥಿಗಳಾಗಿ ಉಳಿದುಕೊಳ್ಳುವುದನ್ನು ಮಾತ್ರವೇ ಕಂಡ ಕೆಲವರು ಆಕ್ಷೇಪವೆತ್ತಿದ್ದುಂಟು: "ಸ್ವಾಮೀಜಿ, ನೀವು ಯಾವಾಗಲೂ ಸಿರಿವಂತರಲ್ಲೇ ಅಥವಾ ರಾಜರಲ್ಲೇ ಆಶ್ರಯ ಪಡೆಯುವುದೇಕೆ?" ಎಂದು. ಆಗ ಸ್ವಾಮೀಜಿಯವರು ಹೇಳುತ್ತಾರೆ: "ನಾನು ಸಿರಿವಂತರ ಅಥವಾ ರಾಜರ ಜೊತೆಗಿದ್ದು ಮೆಲ್ಲನೆ ಅವರ ತಲೆಯಲ್ಲಿ ತ್ಯಾಗ-ಸೇವೆಗಳ ಆದರ್ಶವನ್ನು ತುರುಕಿದ್ದೇ ಆದರೆ ಮುಂದೆ ಅವರಿಂದ ಸಹಸ್ರಾರು ಬಡಜನರಿಗೆ ಪ್ರಯೋಜನವಾಗುತ್ತದೆ. ಆದರೆ ನಾನು ಕೇವಲ ಬಡವರೊಂದಿಗೆ ಉಳಿದುಕೊಂಡೆನಾದರೆ ಅವರ ಕಣ್ಣೀರಿನೊಂದಿಗೆ ನನ್ನ ಕಣ್ಣೀರನ್ನೂ ಸೇರಿಸಬಹುದೇ ಹೊರತು ಇನ್ನೇನು ತಾನೆ ಸಾಧ್ಯ?"

ಎಂಥ ಮಹತ್ತರ ಉದ್ದೇಶಗಳಿಂದ ಕೂಡಿದ ಸ್ವಾಮಿ ವಿವೇಕಾನಂದರ ನಡೆ-ನುಡಿಗಳು! ಬರಿಗೈ ಸಂನ್ಯಾಸಿಯ ಮನದಲ್ಲಿ ಬಡವರಿಗೆ ನೆರವಾಗುವ ಭಾವನೆಯೇನೋ ಬರಬಹುದು. ಆದರೆ ಅದನ್ನು ಕಾರ್ಯರೂಪಕ್ಕೆ ತರುವ ಸಾಧ್ಯತೆ ಎಲ್ಲಿದೆ? ಇಲ್ಲಿ ಸ್ವಾಮಿ ವಿವೇಕಾನಂದರು ಅದಕ್ಕೊಂದು ಸುವರ್ಣೋಪಾಯವನ್ನೇ ಕಂಡುಕೊಂಡಿದ್ದಾರೆ—ಸಿರಿವಂತರ ಸ್ನೇಹ ಮಾಡಿ ಬಡವರಿಗೆ ಬಡಿಸುವುದು! ಅವರು ಹೇಳುವ ಮಾತಿನ ಧಾಟಿ ನೋಡಿ!

ಶಿಕ್ಷಣಕ್ಕೆ ಸಂಬಂಧಿಸಿದಂತೆ ಸ್ವಾಮೀಜಿಯವರು ಹೇಳುತ್ತಾರೆ: "ನಮ್ಮ ರಾಷ್ಟ್ರದ ಶಿಕ್ಷಣಕ್ರಮದ ಮೇಲೆ ನಮಗೆ ಸ್ವಾತಂತ್ರ್ಯವಿರಬೇಕು. ನಿಮಗಿದು ಅರ್ಥವಾಯಿತೆ? ನೀವೀಗ ಪಡೆಯುತ್ತಿರುವ ಶಿಕ್ಷಣದಲ್ಲಿ ಕೆಲವು ಒಳ್ಳೆಯ ಅಂಶಗಳಿವೆ. ಆದರೆ ಪ್ರತಿಕೂಲ ಅಂಶಗಳು ಅದೆಷ್ಟಿವೆಯೆಂದರೆ ಅವು ಒಳ್ಳೆಯ ಅಂಶಗಳನ್ನೆಲ್ಲ ತುಳಿದುಹಾಕಿಬಿಡುತ್ತವೆ. ಮೊದಲನೆಯದಾಗಿ ಅದು ವ್ಯಕ್ತಿನಿರ್ಮಾಣಕಾರಿಯಾದ ಶಿಕ್ಷಣವಲ್ಲ. ನಮಗಿಂದು ಬೇಕಾಗಿರುವುದು ವ್ಯಕ್ತಿಗಳನ್ನು ಪುರುಷಸಿಂಹರನ್ನಾಗಿಸಬಲ್ಲ ವಿದ್ಯಾಭ್ಯಾಸ." ಅವರು ಭಾರತೀಯರಿಗೆ ಹೇಳುತ್ತಾರೆ : "ನಿಮಗೆ ಬೇಕಾದ ತಾಂತ್ರಿಕ ಶಿಕ್ಷಣವನ್ನು ಪಾಶ್ಚಾತ್ಯರಿಂದ ಪಡೆಯಿರಿ. ಆದರೆ ಪ್ರತಿಯಾಗಿ ಅವರಿಗೆ ಅವಶ್ಯವಾಗಿ ಬೇಕಾಗಿರುವ ಆಧ್ಯಾತ್ಮಿಕತೆಯನ್ನು ನೀಡಿ. ಭಿಕ್ಷುಕರಂತೆ ಅವರ ಬಳಿಗೆ ಹೋಗದಿರಿ. ನಿಮ್ಮ ಬಳಿ ಅವರಿಗೆ ಬೇಕಾದ ಆಧ್ಯಾತ್ಮಿಕತೆಯಿದೆ, ಕೊಡಿ. ಅವರ ಬಳಿ ನಿಮಗೆ ಬೇಕಾದ ತಾಂತ್ರಿಕತೆಯಿದೆ, ಪಡೆದುಕೊಳ್ಳಿ."

ಸ್ವಾಮೀಜಿಯವರ ಋಷಿದೃಷ್ಟಿ ಭಾರತವನ್ನು ಕಾಣುವ ಪರಿಯಲ್ಲಿ ಸಹಜವಾಗಿಯೇ ಒಂದು ನೂತನತೆಯಿದೆ. ಅವರೆನ್ನುತ್ತಾರೆ: "ನಾನು ಭವಿಷ್ಯವನ್ನು ಕಾಣುವುದಿಲ್ಲ, ಕಾಣಲು ಬಯಸುವುದೂ ಇಲ್ಲ. ಆದರೆ ನನ್ನ ಮುಂದೆ ಸಜೀವ ಸ್ವಪ್ನವಾಗಿ ನಾನು ಕಾಣುತ್ತಿರುವ ದೃಶ್ಯವೊಂದಿದೆ. ಅದೇನೆಂದರೆ, ನಮ್ಮ ತಾಯಿ ಭಾರತ ಈಗ ಮತ್ತೊಮ್ಮೆ ಜಾಗೃತಗೊಂಡಿದ್ದಾಳೆ. ನವಶಕ್ತಿಯಿಂದೊಡಗೂಡಿ ತನ್ನ ಸಿಂಹಾಸನದಲ್ಲಿ ವಿರಾಜಮಾನಳಾಗಿ ಎಂದಿಗಿಂತಲೂ ಪ್ರಖರವಾಗಿ ಬೆಳಗುತ್ತಿದ್ದಾಳೆ. ನೀವು ಸಮಸ್ತ ಜಗತ್ತಿನಲ್ಲಿ ಸಂಚರಿಸುತ್ತ ಅವಳ ವೈಭವವನ್ನು ಘೋಷಿಸಿರಿ."

ಭೋಗಭೂಮಿಯಾದ ಪಾಶ್ಚಾತ್ಯರಾಷ್ಟ್ರಗಳಿಂದ ಸ್ವಾಮೀಜಿ ಭಾರತಕ್ಕೆ ಹಿಂದಿರುಗುವ ಮುನ್ನ ಅವರ ಆಂಗ್ಲ ಸ್ನೇಹಿತನೊಬ್ಬ ಕೇಳುತ್ತಾನೆ: "ಸ್ವಾಮೀಜಿ, ಈ ಸಂಪದ್ಭರಿತ, ಶಕ್ತಿಯುತ, ವಿಲಾಸಯುತ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಾಲ್ಕು ವರ್ಷಗಳನ್ನು ಕಳೆದಮೇಲೆ, ಈಗ ನಿಮಗೆ ನಿಮ್ಮ ಮಾತೃಭೂಮಿಯ ಬಗ್ಗೆ ಏನೆನ್ನಿಸುತ್ತದೆ?" ಈ ಪ್ರಶ್ನೆಗೆ ಸ್ವಾಮೀಜಿ ನೀಡಿದ ಉತ್ತರವು ಅದ್ಭುತವಾದದ್ದು, ಚರಿತ್ರಾರ್ಹವಾದದ್ದು. ಅವರು ಮಿಂಚಿನಂತೆ ಉತ್ತರಿಸುತ್ತಾರೆ: "ನಾನು ಈ ಪಾಶ್ಚಾತ್ಯ ರಾಷ್ಟ್ರಗಳಿಗೆ ಬರುವ ಮೊದಲೂ ಭಾರತವನ್ನು ಪ್ರೀತಿಸುತ್ತಿದ್ದೆ. ಆದರೆ ಈಗ ಭಾರತದ ಕಣಕಣವೂ ನನಗೆ ಪವಿತ್ರವಾಗಿದೆ. ಭಾರತದಲ್ಲಿ ಬೀಸುತ್ತಿರುವ ವಾಯುವೂ ನನಗೆ ಪವಿತ್ರ. ಈಗ ನನ್ನ ಪಾಲಿಗೆ ಭಾರತವೊಂದು ಪವಿತ್ರಭೂಮಿ, ಯಾತ್ರಾಸ್ಥಳ, ತೀರ್ಥಕ್ಷೇತ್ರ!"

ಸ್ವಾಮೀಜಿಯವರು ಭಾರತದ ಬಗ್ಗೆ ಅತ್ಯುನ್ನತ ಭಾವನೆ ತಾಳಿರುವುದೇನೋ ಸರಿಯೇ. ಆದರೆ ಇದೇ ಭಾರತದ ಅನೇಕ ಲೋಪದೋಷಗಳನ್ನು ತಿದ್ದಿ ಸುಸಂಸ್ಕೃತ ಹಾಗೂ ಭವ್ಯ-ಸಶಕ್ತ ರಾಷ್ಟ್ರವನ್ನಾಗಿಸಲು ಅವರು ನೀಡಿದ ಸಲಹೆ-ಸೂಚನೆಗಳು ಸಹಸ್ರಾರು. ಭಾರತದಲ್ಲಿ ಸಾಮಾಜಿಕ ಸುಧಾರಣೆ, ಶೈಕ್ಷಣಿಕ ಸುಧಾರಣೆ, ರಾಜಕೀಯ ಸುಧಾರಣೆ ಹಾಗೂ ಧಾರ್ಮಿಕ-ಆಧ್ಯಾತ್ಮಿಕ ಸುಧಾರಣೆಗಳನ್ನು ತರುವುದರ ಮೂಲಕ ಸರ್ವಾಂಗಸುಂದರವಾದ ನವಭಾರತವನ್ನು ನಿರ್ಮಾಣ ಮಾಡುವ ಕನಸು ಕಂಡವರು ಅವರು. ಇಂದು ಸಹಸ್ರಾರು ಸಂಘ-ಸಂಸ್ಥೆಗಳು ಅವರ ಕರೆಗೆ ಓಗೊಟ್ಟು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ನಿರತವಾಗಿರುವುದನ್ನು ಕಾಣುತ್ತೇವೆ. ಇದೊಂದು ಆಶಾದಾಯಕ ಲಕ್ಷಣ. ಈ ಪವಿತ್ರ ಪ್ರಯತ್ನ ಸಹಸ್ರಮಡಿಯಾಗಲೆಂದು ಹಾರೈಸೋಣ.

ಸ್ಥಳದಾನ: ಎ.ಉಷಾದೇವಿ, ಬೆಂಗಳೂರು